ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕಃ **4.1.2019**

ಮುಂದುವರಿದ ಪಾಟೀ ಸವಾಲುಃ ಶ್ರೀ ಹೆಚ್ ಇ ಪಿ ವಕೀಲರಿಂದ

ಟ್ರಸ್ಟ್ ಪ್ರಾರಂಭವಾದಾಗ, ಧರ್ಮದರ್ಶಿಗಳು ನೀಡಿದ 8 ಲಕ್ಷ ಹೊರತುಪಡಿಸಿ, ನಮ್ಮ ಬಳಿ ಬೇರೆ ಹಣ ಇರಲಿಲ್ಲ. ನಾನು ಸಹ ಒಂದು ಲಕ್ಷ ಹಣವನ್ನು ನೀಡಿರುತ್ತೇನೆ. ಎಲ್ಲಾ ದರ್ಮದರ್ಶಿಗಳು ಹಣವನ್ನು ನಗದಾಗಿ ನೀಡಲಾಗಿರುತ್ತದೆ. ಅದರ ಸಂಬಂಧ ಯಾವುದೆ ರಶೀದಿಗಳು ಇರುವುದಿಲ್ಲ. ನಿಪಿ-8 ದರ್ಮದರ್ಶಿಗಳು ನೀಡಿದ ವಂತಿಗೆ ಹಣ 2001-2006 ನೇ ಇಸವಿಯವರೆವಿಗೆ ಆಗಿರುತ್ತದೆ. ದಿಃ13.4.2006 ರಂದು ಟಿ ಕೆ ಸುಧೀರ್ ಮತ್ತು ಲಿಂಗಪ್ಪ ರವರು ರಾಜೀನಾಮೆ ನೀಡಿರುತ್ತಾರೆ. ದಿಃ13.4.2006 ರ ಮಾಸಿಕ ಸಭೆಯಲ್ಲಿ ಅಂಗೀಕಾರವಾಗಿರುತ್ತದೆ. ಅದನ್ನು ನಡವಳಿಕೆಯಲ್ಲಿ ನಮೂದು ಮಾಡಿರುತ್ತೇವೆ. ಸದ್ರಿ ಮಹಾ ಸಭೆಯಲ್ಲಿ ಎಲ್ಲಾ ಧರ್ಮದರ್ಶಿಗಳು ಹಾಜರಿದ್ದರು. ಅವರು ರಾಜೀನಾಮೆ ಹೊಂದುವ ಸಮಯದಲ್ಲಿ ಟ್ರಸ್ಟ್ ನ ಲೆಕ್ಕ ನೀಡಬೇಕೆಂದು ನಾವು ಕೇಳಿರುತ್ತೇವೆ.

ನಿಪಿ-4 ರಂತೆ ಎಲ್ಲಾ ಲೆಕ್ಕಗಳ ಸಂಬಂಧ ದಾಖಲೆಗಳನ್ನು ಕಾರ್ಯದರ್ಶಿ ಬಳಿ ಇರಬೇಕೆಂದು ನಿಯಮಗಳು ಇರುತ್ತದೆ ಎಂದರೆ ಸರಿ. ಆದರೆ ಎಲ್ಲಾ ದಾಖಲೆಗಳು 1 ನೇ ಆರೋಪಿಯ ಬಳಿ ಇತ್ತು. 2001-2006 ನೇ ಇಸವಿಯವರೆವಿಗೂ ದಾಖಲೆಗಳನ್ನು 1 ನೇ ಅರೋಪಿ ಇಟ್ಟುಕೊಂಡಿರುತ್ತಾರೆ ಎಂದು ಚಾಸಾ-8 ರವರು ನಮಗೆ ತಿಳಿಸಿರುವುದಿಲ್ಲ ಮತ್ತು ಹಸ್ತಾಂತರಿಸಬೇಕೆಂದು ಕೇಳಿರುವ ಬಗ್ಗೆ ನೆನಪಿಲ್ಲ. ನಿಪಿ-14 ರಿಂದ 18 ದಾಖಲೆಗಳು ಚಾಸಾ-8 ರವರು ರಾಜೀನಾಮೆ ನೀಡಿದ ನಂತರ ನಮ್ಮ ಟ್ರಸ್ಟ್ಗೆ ಬರೆದ ಪತ್ರಗಳಾಗಿರುತ್ತದೆ ನಿಪಿ-18 ಮತ್ತು 19 ಒಂದೆ ದಾಖಲೆಗಳಾಗಿರುತ್ತದೆ ಎಂದರೆ ಸರಿ. ಟ್ರಸ್ಟ್ ನ ಲೆಕ್ಕದ ವರದಿ ನೀಡಬೇಕೆಂದು ನಾವು ಎಲ್ಲಾ ಮಾಸಿಕ ಸಭೆಯಲ್ಲಿ ಆಡಳಿತ ಮಂಡಳಿಯವರನ್ನು ಕೇಳಿರುತ್ತೇವೆ. ಅದು ಚರ್ಚೆ ವಿಷಯ ಸಹ ಆಗಿತ್ತು. ಅದನ್ನು ನಡವಳಿ ಪುಸ್ತಕದಲ್ಲಿ ನಮೂದಾಗಿರುತ್ತದೊ ಇಲ್ಲವೊ ನನಗೆ

ಗೊತ್ತಿಲ್ಲ. ಸದ್ರಿ ನಡವಳಿಕೆ ಪುಸ್ತಕವನ್ನು ನ್ಯಾಯಾಲಯಕ್ಕೆ ನೀಡಲು ನನಗೆ ತೊಂದರೆ ಇರುವುದಿಲ್ಲ.

ನಿಪಿ-16 ರಲ್ಲಿ ಟ್ರಸ್ಟ್ ನ ಕೆಲವು ಮೂಲ ದಾಖಲೆಗಳನ್ನು ಚಾಸಾ-8 ರವರ ಬಳಿ ಇರುತ್ತದೆ ಎಂದು ತಿಳಿಸಲಾಗಿರುತ್ತದೆ ಎಂದರೆ ಸರಿ. ಚಾಸಾ-10 ಲೆಕ್ಕ ಪರಿಶೋಧಕರಾಗಿರುತ್ತಾರೆ ಎಂದರೆ ಸರಿ. ನಿಪಿ-4 ರಂತೆ ನಾವು ಬೇರೆ ಲೆಕ್ಕ ಪರಿಶೋಧಕರನ್ನು ನೇಮಕ ಮಾಡಿಕೊಳ್ಳಬೇಕೆಂದು ನಿಯಮ ಇರುತ್ತದೆ ಎಂದರೆ ಸರಿ. ನಾವು ಚಾಸಾ-16 ರವರನ್ನು ಲೆಕ್ಕ ಪರಿಶೋಧಕರಾಗಿ ನೇಮಕ ಮಾಡಿರುವುದಿಲ್ಲ.

ಆರೋಪಿಗಳು ಮತ್ತು ನಮ್ಮ ಟ್ರಸ್ಟ್ ನ ನಡುವೆ ಮಡಿಕೇರಿ ನ್ಯಾಯಾಲಯದಲ್ಲಿ ಓ ಎಸ್ ನಂ:68/2001 ರಂತೆ ದಾವೆ ಇತ್ತು. ಸದ್ರಿ ದಾವೆಯಲ್ಲಿ ನಾನು ಸಹ ಪಕ್ಷಗಾರನಾಗಿದ್ದೆ ಮತ್ತು ಆ ದಾವೆಯ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಸದ್ರಿ ದಾವೆಯಲ್ಲಿ ಯಾರು ಸಾಕ್ಷಿ ನುಡಿದಿರುತ್ತಾರೆ ಎಂದು ಮಾಹಿತಿ ಇರುವುದಿಲ್ಲ. ನಮ್ಮ ಟ್ರಸ್ಟ್ ನ ಪರ ಚಾಸಾ-10 ರವರು ದಾವೆಯನ್ನು ಪ್ರತಿನಿಧಿಸುತ್ತಿದ್ದರು ಮತ್ತು ಅದರ ಬಗ್ಗೆ ನಡವಳಿಯಲ್ಲಿ ನಮೂದಾಗಿರುತ್ತದೆ. ಸದ್ರಿ ದಾವೆಯಲ್ಲಿ ನಾನು ಸಾಕ್ಷಿ ನುಡಿದಿರುವುದಿಲ್ಲ. ಸದ್ರಿ ದಾವೆಯಲ್ಲಿ ವಾದಿಗಳು ಏನು ಹೇಳಿಕೆ ನೀಡಿರುತ್ತಾರೆ ಮತ್ತು ಏನು ಪಾಟೀ ಸವಾಲು ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಸದ್ರಿ ದಾವೆಯಲ್ಲಿ ಚಾಸಾ-10 ರವರು ಚಾಸಾ-16 ರವರನ್ನು ಲೆಕ್ಕ ಪರಿಶೋಧಕರನ್ನು ನೇಮಕ ಮಾಡಿಕೊಂಡಿರುತ್ತಾರೆ ಎಂದು ತಿಳಿಸಿರುತ್ತಾರೆ ಎಂದರೆ ಗೊತ್ತಿಲ್ಲ.

ದಿ:2.4.2002 ರಿಂದ ದಿ:31.3.2006 ರವರೆವಿಗೆ ನಮ್ಮ ಟ್ರಸ್ಟ್ ನ ಲೆಕ್ಕ ಪರಿಶೋಧನೆಯನ್ನು ಯಾರು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಚಾಸಾ-16 ರವರ ಪರಿಚಯ ಇರುವುದಿಲ್ಲ. ಅವರು ನಮ್ಮ ಟ್ರಸ್ಟ್ಗೆ ಯಾವ ದಾಖಲೆ ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ-13 ರ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಅದನ್ನು ನಾನು ಪೊಲೀಸರಿಗೆ ನೀಡಿರುವುದಿಲ್ಲ ಎಂದರೆ

ಸರಿ. ನಿಪಿ-13 ರಲ್ಲಿ ನಮಗೆ ಸಿಕ್ಕಿದ ದಾಖಲೆಯಂತೆ ಲೆಕ್ಕ ಪರಿಶೋಧನೆ ಮಾಡಿಸಿರುತ್ತೇವೆ, ಆದರೆ ಆರೋಪಿಗಳು ಇನ್ನು ಹೆಚ್ಚಿನ ಹಣ ನೀಡಬೇಕಾದ ಕಾರಣ ನಾವು ಅದನ್ನು ಒಪ್ಪುವುದಿಲ್ಲ. ನಿಪಿ-13 ರ ಲೆಕ್ಕ ಸರಿಯಿರುವುದಿಲ್ಲ. ನಮ್ಮ ಟ್ರಸ್ಟ್ಗೆ ಎಷ್ಟು ಹಣ ಬಂದಿರುತ್ತದೆ ಎಂದು ನಿಪಿ-8 ರಲ್ಲಿ ತೋರಿಸಲಾಗಿರುತ್ತದೆ. ನಮ್ಮ ಟ್ರಸ್ಟ್ಗೆ ವಂತಿಕೆ, ಶುಲ್ಕ ಮತ್ತು ಇತರೆಯಿಂದ ಎಷ್ಟು ಹಣ ಬಂದಿರುತ್ತದೆ ಎಂದು ನಾನು ಹೇಳಲು ಆಗುವುದಿಲ್ಲ.

2001-2006 ನೇ ಇಸವಿಯವರೆವಿಗೂ ನಮ್ಮ ಶಾಲೆಯ ಕಟ್ಟಡದ ಸಂಬಂಧ 24,41,357/- ಖರ್ಚಾಗಿರುತ್ತದೆ ಎಂದರೆ ಸರಿ. 8 ಲಕ್ಷವನ್ನು ಹೊರತುಪಡಿಸಿ, ಉಳಿದ ಹಣವನ್ನು ಯಾವ ರೀತಿ ಹೊಂದಿಸಿ ಮೇಲೆ ಹೇಳಿದ ಖರ್ಚನ್ನು ಭರಸಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಮೊದಲನೆ ಬಾರಿ ಟ್ರಸ್ಟ್ ನ ವತಿಯಿಂದ ಯಾವ ವರ್ಷದಲ್ಲಿ ಬ್ಯಾಂಕಿನಿಂದ ಸಾಲ ಪಡೆದುಕೊಳ್ಳಲಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಮೊದಲ 2 ವರ್ಷ ನಾವು ಬ್ಯಾಂಕಿನಿಂದ ಸಾಲ ಪಡೆದುಕೊಂಡಿರುವುದಿಲ್ಲ ಎಂದರೆ ಸರಿ.

ಶಾಲೆ ಪ್ರಾರಂಭವಾದಾಗ ಚಾಸಾ-10 ರವರು ಶಾಲೆಯ ಪ್ರಾಂಶುಪಾಲರಾಗಿದ್ದರು ಎಂದರೆ ಸರಿ. ಅವರು 2002 ರಿಂದ 2004 ರವರೆವಿಗೆ ಪ್ರಾಂಶುಪಾಲರಾಗಿ ಸಂಬಳ ಪಡೆದುಕೊಳ್ಳುತ್ತಿದ್ದರು ಎಂದರೆ ಸರಿ. 2002 ನೇ ಇಸವಿಯಲ್ಲಿ 8 ನೇ ತರಗತಿ ಮಾತ್ರ ನಮ್ಮ ಶಾಲೆ ಇದ್ದು, ಅದರಲ್ಲಿ 17 ಜನ ಮಾತ್ರ ವಿಧ್ಯಾರ್ಥಿಗಳು ಇದ್ದರು ಎಂದರೆ ಸರಿ. ಶಿಕ್ಷಕರಿಗೆ ಮತ್ತು ಡಿ ಗ್ರೂಪ್ ನೌಕರರು ಸೇರಿ 15 ಜನರಿಗೆ ಸಂಬಳ ನೀಡಲಾಗಿತ್ತು ಎಂದರೆ ಸರಿ. 2002-2003 ರಲ್ಲಿ ಶಾಲೆ ಕಟ್ಟಡಕ್ಕೆ 9,55,708/- ಖರ್ಚಾಗಿರುತ್ತದೆ ಎಂದರೆ ಗೊತ್ತಿಲ್ಲ. 2002-2003 ರಲ್ಲಿ ಶಾಲೆಯ ಕಟ್ಟಡದ ನಿರ್ಮಾಣಕ್ಕೆ ಹಣ ಖರ್ಚಾಗಿರುತ್ತದೆ ಎಂದರೆ ಸರಿ. ಶಾಲಾ ನೀರಿನ ಫಿಲ್ಟರ್ಗೆ ಹಣ ಸಹ ವೆಚ್ಚ ಮಾಡಲಾಗಿತ್ತು ಎಂದರೆ ಸರಿ. 2002-2003 ರವರೆವಿಗೆ ಶಾಲಾ ಸಿಬ್ಬಂದಿಯವರಿಗೆ ಎಷ್ಟು ಹಣವನ್ನು ಸಂಬಳವಾಗಿ ನೀಡಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. 2,07,589/- ಹಣವನ್ನು ಸಂಬಳವಾಗಿ ನೀಡಲಾಗಿತ್ತು ಎಂದರೆ ಗೊತ್ತಿಲ್ಲ.

2002-2003 ನೇ ಇಸವಿಯವರೆವಿಗೆ ಯಾವ ಧರ್ಮದರ್ಶಿಗಳು ವಂತಿಕೆ ಹಣವನ್ನು ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. 2002-2003 ನೇ ಇಸವಿಯಲ್ಲಿ ನಮ್ಮ ಟ್ರಸ್ಟ್ಗೆ ವಂತಿಕೆ, ಶುಲ್ಕ ಮತ್ತು ಇತರೆ ಮೂಲಗಳಿಂದ ಎಷ್ಟು ಹಣ ಬಂದಿರುತ್ತದೆ ಎಂದು ನಾನು ಹೇಳಲು ಆಗುವುದಿಲ್ಲ. ಸದ್ರಿ ಅವಧಿಯಲ್ಲಿ ನಾನು ಎಷ್ಟು ಹಣವನ್ನು ವಂತಿಕೆಯಾಗಿ ನೀಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ನಿಪಿ-8 ನ್ನು ಯಾವ ಆಧಾರದ ಮೇರೆಗೆ ಬರೆಯಲಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ, ಆದರೆ ಅದನ್ನು 1 ನೇ ಆರೋಪಿ ಬರೆದಿರುತ್ತಾರೆ.

2006 ನೇ ಇಸವಿಯವರೆವಿಗೂ 2 ಮತ್ತು 3 ನೇ ಆರೋಪಿಗಳು ನಮ್ಮ ಆಡಳಿತ ಮಂಡಳಿಯಲ್ಲಿ ಸೇವೆ ಸಲ್ಲಿಸಿರುವುದಿಲ್ಲ ಎಂದರೆ ಸರಿ. ನಿಪಿ-8 ನ್ನು ಎಲ್ಲಾ ಧರ್ಮದರ್ಶಿಗಳ ಸಮಕ್ಷಮದಲ್ಲಿ ಬರೆಯಲಾಗಿರುತ್ತದೆ. ನಿಪಿ-8 ರ ಹಣ ಮಾರ್ಚ್ 2006 ರ ಪೂರ್ವದಲ್ಲಿ ನೀಡಿದ ಹಣವಾಗಿರುತ್ತದೆ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ ದ ನ್ಯಾ ದಂ, ಕುಶಾಲನಗರ.